


ಪ್ರವಚನ ನಿರತ ಗಾಂಧಿ–ತೈಲಚಿತ್ರ



ದಂಡಿ ತೀರದಲ್ಲಿ ಉಪ್ಪು ತಯಾರಿಕೆ–ಗಾಜಿನ ಮಂಟಪದ ಚಿತ್ರ

‘ನನ್ನ ಜೀವನವೇ ನನ್ನ ಸಂದೇಶ’ ಎಂಬ ಘೋಷವಾಕ್ಯದ ಗ್ಯಾಲರಿಯಲ್ಲಿ ಏಳು ವಿಭಾಗಗಳಿವೆ. ಪ್ರತಿ ವಿಭಾಗವೂ ಗಾಂಧೀಜಿಯವರ ಜೀವನದ ಪ್ರಮುಖ ಹಂತಗಳಿಗೆ ಸಂಬಂಧಿಸಿದ ವರ್ಣಚಿತ್ರಗಳನ್ನು ಹೊಂದಿವೆ. ಅವರ ಬಾಲ್ಯದ ದಿನಗಳು, ದಕ್ಷಿಣ ಆಫ್ರಿಕಾದಲ್ಲಿನ ಹೋರಾಟಗಳು, ಟಾಲ್‌ಸ್ಟಾಯ್ ಆಶ್ರಮ, ದುಂಡು ಮೇಜಿನ ಪರಿಷತ್ತು, ಹರಿಪುರ ಕಾಂಗ್ರೆಸ್ ಅಧಿವೇಶನದಲ್ಲಿ ಸುಭಾಷ್‌ಚಂದ್ರ ಬೋಸರೊಂದಿಗೆ ಸಮಾಲೋಚನೆ, ಸೆರೆಮನೆ ವಾಸ, ಭಾರತ ಬಿಟ್ಟು ತೊಲಗಿ ಚಳುವಳಿ, ಇಪ್ಪತ್ತೈದು ವರ್ಷಗಳು ಗಾಂಧೀಜಿಯವರ ಮಗನಂತೆ ಅವರೊಂದಿಗೆ ಜೀವಿಸಿ ಅವರ ಮಾತುಗಳನ್ನು ಚಟುವಟಿಕೆಗಳನ್ನು ದಾಖಲಿಸಿದ್ದ ಮಹಾದೇವಬಾಯಿ ಮತ್ತು ಜೀವನ ಸಂಗಾತಿ ಕಸ್ತೂರಿಬಾ, ಸ್ವತಂತ್ರ ಭಾರತದ ಕುರಿತ ಗಾಂಧೀಜಿಯವರ ದೃಷ್ಟಿಕೋನ ಪ್ರತಿಪಾದಿಸುವ 1909ರ ಹಿಂದ್ ಸ್ವರಾಜ್‌ನ ಹಸ್ತಪ್ರತಿ, ಅವರ ಉಪವಾಸಗಳು ಮುಂತಾಗಿ ಸಾವಿರಾರು ಫೋಟೋಗಳು, ಛಾಯಾಚಿತ್ರಗಳು, ಹಸ್ತಪ್ರತಿಗಳೆಲ್ಲ ಇಲ್ಲಿ ಪ್ರದರ್ಶಿಸಲ್ಪಡುತ್ತಿವೆ.

ಇಲ್ಲಿನ ಅಡುಗೆ ಮನೆಗೂ ಪ್ರವಾಸಿಗರಿಗೆ ಮುಕ್ತ ಪ್ರವೇಶ. ಪಕ್ಕದಲ್ಲಿ ಆಶ್ರಮ ನೋಡಬಂದ ಹಲವಾರು ವಿದೇಶಿಯರು ಊಟ ಮಾಡುತ್ತಿದ್ದರು. ಅಲ್ಲಿಂದ ಹೊರಬರುವಾಗ ಹೊರಗಿನ ಹಜಾರದ ಜಗುಲಿಯಲ್ಲಿ ಒಂದಷ್ಟು ಮಕ್ಕಳಿಗೆ ಕರಕುಶಲ ತರಬೇತಿ ನಡೆಯುತ್ತಿತ್ತು. ಮಕ್ಕಳು ನೆಲದ ಮೇಲೆ ಹಾಸಿದ ಜಮಖಾನದ ಮೇಲೆ ಕುಳಿತಿದ್ದರು. ಕೊನೆಯಲ್ಲಿ ಸಾಮೂಹಿಕ ಪ್ರಾರ್ಥನೆ ಮಾಡಿದರು. ಸಬರಮತಿಯ ಆಶ್ರಮ ಉನ್ನತ ಧ್ಯೇಯ, ಸರಳತೆಯ ಗಾಂಧೀಜಿಯವರ ಸಾಧನೆಗಳ ಮೆಲುಕು ಹಾಕಲು ಒಂದು ಸೂಕ್ತ ಸ್ಥಳ.